# ಓದುಗರ ಪ್ರತಿಕ್ರಿಯೆ

ವಿವೇಕಪ್ರಭದ ಫೆಬ್ರವರಿ ೨೦೦೯ ರ ಸಂಚಿಕೆಯ ಕಥಾಪ್ರಭದಲ್ಲಿ ಪ್ರಕಟವಾದ 'ಮಹಾದೇವನೇ ಮನೆಗೆ ಬಂದಾಗ' ಪ್ರಸಂಗವನ್ನು ಶ್ರೀಮತಿ ಶಾರದಾ ಐಯ್ಯಂಗಾರ್ ಅವರು ಮನ ಮಿಡಿಯುವಂತೆ ಬರೆದಿದ್ದಾರೆ. ಇದನ್ನು ಓದಿ ತುಂಬಾ ಸಂತೋಷವಾಗಿದೆ. ಸ್ವಾಮಿ ವಿವೇಕಾನಂದರ ಆಶೀರ್ವಾದ ನಮ್ಮ ನಿಮ್ಮೆಲ್ಲರ ಮೇಲೆ ಇರಲಿ ಎಂದು ಆಶಿಸುತ್ತೇನೆ. ಲೇಖಕಿಗೆ ಮತ್ತೊಮ್ಮೆ ಧನ್ಯವಾದಗಳು. – ಕೆ.ವೆಂ. ಸ್ವಾಮಿ, ಬೆಂಗಳೂರು

ವಿದ್ವಾನ್ ಶ್ರೀಯುತ ಡಾ. ರಾಮಚಂದ್ರಸ್ವಾಮಿಯವರು ಏಪ್ರಿಲ್ ೨೦೦೯ ರ ಸಂಚಿಕೆಯಲ್ಲಿ (**ಅಧ್ಯಾತ್ಮ ಮತ್ತು ಮಾಧ್ಯಮ**) ಅಧ್ಯಾತ್ಮದ ಸಾರವನ್ನು ಸೂತ್ರರೂಪದಲ್ಲಿ ಕೊಟ್ಟಿದ್ದಾರೆ. ಇದೊಂದು ಅತ್ಯಂತ ಉತ್ಕೃಷ್ಟವಾದ ಲೇಖನ. ಆದರೆ ಪುಟ ೧೪ ರಲ್ಲಿ ಬಂದಿರುವ, " ವಯಸ್ಸಾದ ಮೇಲೆ ಮನುಷ್ಯನ ಮನಸ್ಸು ಒಂದು ವಿಧವಾದ ಭ್ರಮೆಗೀಡಾಗುತ್ತದೆ" ಎಂಬ ವಾಕ್ಯ ಸಾರ್ವತ್ರಿಕ ಅಭಿಪ್ರಾಯವೆಂದು ಸ್ವೀಕರಿಸಲು ನನ್ನ ಮನವು ಒಪ್ಪುವುದಿಲ್ಲ. ಅದು ಸರ್ವಸಾಮಾನ್ಯವಾಗಿದ್ದರೆ ಆ ಮಾತು ಬೇರೆ. ಆದರೆ ಹಿಂದೆ ಆಗಿಹೋದ, ಈಗಲೂ ನಮ್ಮ ಸುತ್ತಮುತ್ತ ಇರುವ ವಯಸ್ಸಾದ ಜನರು ಒಂದು ವಿಧವಾದ ಭ್ರಮೆಗೀಡಾಗುತ್ತಾರೆ ಎಂದರೆ ಅದು ಸಮಂಜಸವಲ್ಲ ಅನಿಸುವುದಿಲ್ಲವೆ? ಅವರೇ ಮುಂದೆ ಉದಹರಿಸಿದ ಶ್ರೀರಾಮಕೃಷ್ಣರು, ಶ್ರೀರಮಣ ಮಹರ್ಷಿಗಳು, ಮಹರ್ಷಿ ಅರವಿಂದರು ಹಾಗೂ ರಾಮಕೃಷ್ಣ ಪರಂಪರೆಯಲ್ಲಿ ಆಗಿ ಹೋದ ಅಸಂಖ್ಯರು –ಇವರೆಲ್ಲ ವಯಸ್ಸಾದ ಮೇಲೆ ಭ್ರಮೆಗೀಡಾಗಿರುವವರ ಪಂಕ್ತಿಯಲ್ಲಿ ಬರುತ್ತಾರೆಯೇ? ಸಾರಾಸಗಟಾಗಿ ವಯಸ್ಸಾದವರೆಲ್ಲರೂ ಭ್ರಮೆಗೀಡಾಗುತ್ತಾರೆ ಎನ್ನುವುದು ಸರಿಯೇ?

ಎರಡನೆಯದಾಗಿ, ರಾಮಕೃಷ್ಣ ವಚನವೇದ ಓದುವಾಗ ಗುರು ಮಹಾರಾಜರಲ್ಲಿ ಒಂದಾಗಿರುವೆನೆಂದು ಕೆಲವರು ಭಾವಿಸುತ್ತಾರೆ; ಕೃತಿಶ್ರೇಣಿ ಓದುವಾಗ ವಿವೇಕಾನಂದರ ಅಪರಾವತಾರ ಎಂದುಕೊಳ್ಳುತ್ತಾರೆ ಎಂದು ಲೇಖಕರು ಬರೆದಿದ್ದಾರೆ. ಇದೊಂದು ಭ್ರಮೆ ಎನ್ನುವುದನ್ನೂ ಮರೆಯಬಾರದು ಎಂದು ನೆನಪಿಸಿದ್ದಾರೆ. ಆದರೆ, ಅಧ್ಯಾತ್ಮ ಕೃತಿಗಳನ್ನು, ಅದರಲ್ಲೂ ಮೇಲೆ ಹೆಸರಿಸಿದವುಗಳನ್ನು ಓದಿದಾಗ ತನ್ಮಯತೆಯ ಭಾವ ಬರುವುದು ಅಸಹಜವೇನಲ್ಲ ಎನ್ನುವುದು ಸರ್ವವಿದಿತ.

ನಾನೂ ಮೇಲಿನ ಗ್ರಂಥಗಳನ್ನು ಓದಿದ್ದೇನೆ. ವಚನವೇದದಂತಹ ದಿವ್ಯಕೃತಿಯನ್ನು ಓದಿದಾಗ ತಾನೇ ಗುರುಮಹಾರಾಜರಲ್ಲಿ ಒಂದಾಗಿ ಹೋಗಿರುವೆನೆಂದು ನಿಜವಾದ ಜಿಜ್ಞಾಸುವು ಎಂದೂ ಭಾವಿಸಲು ಶಕ್ಯವಿಲ್ಲ. ವೈಜ್ಞಾನಿಕ ಮನೋಭಾವದವರು ರಾಮಕೃಷ್ಣ ವಚನವೇದ, ಲೀಲಾಪ್ರಸಂಗಗಳನ್ನು ಓದಿದಾಗ, ಅಂಥವರಿಗೆ ಆ ಮಹಾನ್ ಅವತಾರಪುರುಷರೊಡನೆ ಒಂದಾಗಿಹೋಗಿರುವೆನೆಂಬ ಭಾವನೆ ಉತ್ಪನ್ನವಾಗುವುದೇ? ಸರ್ವಥಾ ಇಲ್ಲ. ತಮ್ಮಲ್ಲಿರುವ ವಿಕಾರಗಳನ್ನು ನಾಶಮಾಡುವ ಪ್ರಚೋದನೆಯನ್ನು ಓದುಗರು ಪಡೆಯುವರೇ ವಿನಾ ಗುರುಮಹಾರಾಜರಲ್ಲಿ ಒಂದಾಗಿ ಹೋಗಿರುವೆನೆಂಬ ಅಹಂಭಾವವು ಅವರನ್ನು ಆವರಿಸಲು ಸಾಧ್ಯವೇ ಇಲ್ಲ. ಅದೇ ರೀತಿ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯನ್ನು ಓದಿದಾಗಲೂ ಕೂಡ ಅಂತಹ ಭಾವನೆ ಬರುವುದಿಲ್ಲ.

–ಶ್ಯಾಮ ಚಿದಂಬರ ನಾನಾವಟಿ, ಬೆಂಗಳೂರು

**ಲೇಖಕರು ಬಹುತೇಕ ವೃದ್ಧರಲ್ಲಿ ಕಾಣಿಸಿಕೊಳ್ಳುವ ಮಾನಸಿಕ ಜಾಡ್ಯವನ್ನು ಉಲ್ಲೇಖಿಸಿದ್ದಾರೇ ಹೊರತು, ಅದು ವೃದ್ಧರೆಲ್ಲರಲ್ಲೂ ಕಾಣಿಸಿಕೊಳ್ಳುತ್ತದೆ ಎಂದು ಹೇಳಿಲ್ಲ. ಅವರ ಮಾತನ್ನು, ಅಧ್ಯಾತ್ಮವನ್ನು ಹಗುರವಾಗಿ ತೆಗೆದುಕೊಳ್ಳುವವರಿಗೆ ಅನ್ವಯಿಸಿಕೊಳ್ಳಬೇಕೇ ಹೊರತು, ಇತರ ಪ್ರಾಮಾಣಿಕ ಸಾಧಕರು ಮತ್ತು ಸಿದ್ಧರ ವಿಷಯದಲ್ಲಿ ವಿಸ್ತರಿಸಿಕೊಳ್ಳಬಾರದು. ಹಾಗೆಯೇ 'ಒಂದಾಗಿಬಿಡುವ' ವಿಷಯದಲ್ಲಿ ಕೂಡ. ಕೆಲವರು ಧರ್ಮಗ್ರಂಥಗಳನ್ನು ಓದುವಾಗ ಭಾವುಕರಾಗಿ ಬಿಡುತ್ತಾರೆ; ಪರಿಪಕ್ವ ಮನಸ್ಸಿಲ್ಲದ ಅವರು ತಾವು ಉನ್ನತ ಹಂತಗಳಿಗೆ ಏರಿಬಿಟ್ಟಿದ್ದೇವೆ ಎಂದು ಭಾವಿಸಿಕೊಳ್ಳುತ್ತಾರೆ. ಇಂತಹವರನ್ನು ಲೇವಡಿ ಮಾಡಿ ಬರೆದ ವಾಕ್ಯಗಳು ಇವು. ಹೀಗಾಗಿ ಲೇಖಕರು ಬರೆದಿರುವುದರಲ್ಲಿ ಯಾವ ಅಸಮಂಜತೆಯೂ ಇಲ್ಲ. –ಸಂ.**

'ವಿದ್ಯಾಭ್ಯಾಸ: ಅಂದು–ಇಂದು' ಕುರಿತು ಡಾ. ಡಿ.ಕೆ. ರಾಜೇಂದ್ರ ಅವರು ಬಹಳ ವಿವರವಾಗಿ ವಿಶ್ಲೇಷಿಸಿದ್ದಾರೆ (ಶಿಕ್ಷಣಪ್ರಭ, ಮೇ ೨೦೦೯). ಅವರು ಹೇಳಿರುವಂತೆ ಇಂದಿನ ವಿದ್ಯಾವಂತರು ನಿಜವಾದ 'ಆದರ್ಶ'ಗಳ ಕಡೆ ಮುಖ ಮಾಡುತ್ತಿಲ್ಲ (ಹೆಚ್ಚೇಕೆ, ಈಗ ಹೆಚ್ಚಿನವರಿಗೆ ಮಾಡುವ ಮನಸ್ಸೂ ಇಲ್ಲ ಎನ್ನಿ!). ಅವರುಗಳ ಗುರಿ ಏನಿದ್ದರೂ ಅಧಿಕಾರ ಲಾಲಸೆ, ಹಣ ಸಂಪಾದನೆ, ಆ ಮೂಲಕ ಗತ್ತುಗಾರಿಕೆ ತೋರಿಸುತ್ತಾ ಮೆರೆದಾಡುವಿಕೆ. ಇವುಗಳೇ ಅವರುಗಳ ನಿಜವಾದ ಆದರ್ಶಗಳಾಗುತ್ತಿವೆ. ಇಂದಿನ ನಮ್ಮ ವಿದ್ಯಾಭ್ಯಾಸದ ಕ್ರಮ ಸರಿಯೋ, ತಪ್ಪೋ ಅದು ಬೇರೆ ವಿಚಾರ. ಆದರೆ ಇಂದಿನ ವೇಗದ ಬದುಕಿನಲ್ಲಿ ನಾವೆಷ್ಟೇ ವಿದ್ಯಾವಂತರಾಗಿದ್ದರೂ/ ಆಗುತ್ತಿದ್ದರೂ ನಮ್ಮಿಂದಲೇ ಪಲಾಯನಗೊಂಡಿರುವ/ಗೊಳ್ಳುತ್ತಿರುವ ಜೀವನ ಮೌಲ್ಯಗಳ ಬಗ್ಗೆ ನಾವುಗಳೇ ಯೋಚಿಸುವಂತಾಯಿತಲ್ಲ! ಇದು ಬಹಳ ವಿಷಾದದ ಸಂಗತಿ.

–ಶಂಕರೇಗೌಡ ತೂಬಿನಕೆರೆ, ಮಂಡ್ಯ

**ವಿವೇಕಪ್ರಭದ ಬಗ್ಗೆ ಓದುಗರಾದ ನಿಮ್ಮ ಪ್ರತಿಕ್ರಿಯೆಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಬರಿಯ ಹೊಗಳಿಕೆ ಇರದೆ, ರಚನಾತ್ಮಕ ವಿಮರ್ಶೆ–ಟೀಕೆಗಳಿರುವ ಪತ್ರಗಳನ್ನು ಪತ್ರಿಕೆಯಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುವುದು. ಇಂಥ ಪತ್ರಗಳು ವಿಚಾರಮಂಥನಕ್ಕೆ ಮತ್ತು ಪತ್ರಿಕೆಯನ್ನು ಉತ್ತಮಪಡಿಸುವುದಕ್ಕೆ ಅವಕಾಶ ನೀಡುವಂತಿರಲಿ. –ಸಂ.**